## ಇಲ್ಲಿಯವರೆಗೆ



ಜೋಹಾನ್ಸ್‌ಬರ್ಗ್‌ನಲ್ಲಿ ಒಂದು ದಿನ ಹರಿಲಾಲ ಬಾಪು ಬಳಿ 'ನೀವು ನನಗೆ ಜೀವನ ಕಲೆ ಕಲಿಸಿದ್ದೀರಿ, ಇನ್ನು ಮುಂದೆ ನಿಮ್ಮನ್ನು ಅವಲಂಬಿಸುವುದು ಬೇಡ. ಸ್ವತಂತ್ರವಾಗಿ ಬದುಕಬೇಕು, ಅದನ್ನು ಕಾರ್ಯರೂಪಕ್ಕೂ ಆದಷ್ಟು ಬೇಗ ತರಬೇಕೆಂದಿದ್ದೇನೆ. ನನ್ನನ್ನು ಆಶೀರ್ವದಿಸಿ' ಎಂದು ಹೇಳುತ್ತಾನೆ. ಆಗ ಬಾಪು, 'ಹರಿ ನೈತಿಕತೆಯನ್ನು ಜೀವನದಲ್ಲಿ ಎಲ್ಲಿಯವರೆಗೆ ಉಳಿಸಿಕೊಳ್ಳುತ್ತೀಯೋ ಅಲ್ಲಿಯವರೆಗೆ ನಿನಗೆ ಸದಾ ನನ್ನ ಆಶೀರ್ವಾದ ಇರುತ್ತದೆ ಎಂದು ಹರಸುತ್ತಾರೆ. ಮುಂದೆ ಡರಬನ್‌ನಿಂದ ಹಿಂದೂಸ್ತಾನಕ್ಕೆ ಹೋಗುವುದಾಗಿ ಹರಿಲಾಲ ಹೇಳುತ್ತಾನೆ. ಮುಂಬಯಿ ರೇವುಪಟ್ಟಣದಲ್ಲಿ ಹರಿಲಾಲ ಬಂದ ಹಡಗು ನಿಲ್ಲುತ್ತದೆ. ಸುಮಾರು ಐದು ವರ್ಷಗಳ ಬಳಿಕ ಹರಿಲಾಲ ಸ್ವದೇಶಕ್ಕ ಮರಳಿ ಬಂದಿದ್ದ. ರಾಜಕೋಟಕ್ಕೆ ಹೋಗಿ ಗುಲಾಬ, ರಾಮಿಯನ್ನು ಕಾಣುತ್ತಾನೆ. ಈಗ 'ಕಾಂತಿ' ಎಂಬ ಮತ್ತೊಂದು ಮಗುವೂ ಹರಿಲಾಲನಿಗಿರುತ್ತದೆ.

ಈಗ ಹರಿಲಾಲನಿಗೆ ವಿದ್ಯಾಭ್ಯಾಸ ಮುಗಿಸುವ ಮನಸ್ಸಾಗುತ್ತದೆ. ಮೆಟ್ರಿಕ್ ಪರೀಕ್ಷೆ ಬರೆಯಬೇಕು. ಇದಕ್ಕಾಗಿ ಓದಬೇಕು ಎನ್ನುತ್ತಲೇ ಕಾಲೂಪುರದ ಮಿಯಾಂಖಾನ್ ಅವರ ಮನೆಗೆ ಹೋಗಿ ಬಾಡಿಗೆ ಮನೆ ವಿಚಾರಿಸುತ್ತಾನೆ. ರೂಮುಗಳು ಖಾಲಿಯಿದ್ದು, ಕೀ ಕೊಡುವುದಾಗಿ ಖಾನ್ ಹೇಳುತ್ತಾರೆ. ಹರಿಲಾಲನ ಪೂರ್ವಾಪರ ವಿಚಾರಿಸಲಾಗಿ ಈತ ಬಾಪೂಜಿ ಮಗ ಎಂದು ಗೊತ್ತಾಗಿ ಆನಂದವಾಗುತ್ತದೆ ಖಾನ್‌ಗೆ. ನಾವಿಬ್ಬರು ಹಳೆಯ ಸ್ನೇಹಿತರು. ಮನೆಗೆ ಬಾಡಿಗೆ ಬೇಡ. ಹಾಗೇ ಬಂದಿರಬಹುದು ಎನ್ನುತ್ತಾರೆ. ಶಾಲೆಗೆ ಸೇರಿದ ಹರಿಲಾಲ ತನ್ನ ತರಗತಿಯ ಎಲ್ಲ ಮಕ್ಕಳಿಗಿಂತ ಅತ್ಯಂತ ಹಿರಿಯ.ಹದಿನಾರು ವರ್ಷದ ಹುಡುಗರ ಮುಂದೆ 24ರ ಹರೆಯದ ಯುವಕ ಹರಿಲಾಲ ಮೇಷ್ಟ್ರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ತಡವರಿಸುತ್ತಾನೆ.

ಮುಂದೆ ಹೆಂಡತಿ ಮತ್ತು ಮಕ್ಕಳೊಂದಿಗೆ ಹರಿಲಾಲ ಅಹಮದಾಬಾದ್‌ನಲ್ಲಿ ಗ್ರಹಸ್ಥ ಜೀವನ ಆರಂಭಿಸುತ್ತಾನೆ. ಇನ್ನು ಕೆಲವೇ ದಿನಗಳಲ್ಲಿ ನಮಗೆ ಮೂರನೆ ಮಗುವಾಗಲಿದೆ ಎಂದು ಗುಲಾಬ ಹೇಳಿದಾಗ ಹರಿಲಾಲ ಕಳವಳಗೊಳ್ಳುತ್ತಾನೆ.

ಅವಳನ್ನು ಛೇಡಿಸಿದ್ದನೋ.. ಇದನ್ನು ಕಂಡ ಚಂದಾ ಒಂದು ಶಬ್ದವನ್ನೂ ಸಹ ಹೇಳದೆ, ಕ್ರೂರ ಹುಲಿಯೊಂದನ್ನು ಕಂಡಂತೆ ದಡಕ್ಕೆ ವೇಗವಾಗಿ ಓಡಿ ಬಂದಳು. ಮಣಿಲಾಲ ಸಹ ಹೊರಳಿ, ತನ್ನ ಒದ್ದೆ ಬಟ್ಟೆಗಳು ಮತ್ತು ನೀರಿಳಿಯುತ್ತಿದ್ದ ಶರೀರದೊಂದಿಗೆ ಆಶ್ರಮದ ದಿಕ್ಕಿಗೆ ಹೊರಟ. ಯಾರೂ ಅವನೆಡೆಗೆ ಗಮನವನ್ನು ಕೊಡಲಿಲ್ಲ, ಆದರೆ ಮಣಿಲಾಲನಿಗೆ ಭಯವಾಯಿತು.

ಅಂದು ರಾತ್ರಿ, ಸಂಜೆಯ ಭಜನೆ ಮತ್ತು ಭೋಜನದ ನಂತರ ಬಾಪೂ ಅವರು ಮಣಿಲಾಲನನ್ನು ತಮ್ಮ ಕೋಣೆಗೆ ಕರೆಸಿದರು. ಹಗಲು ಏನೂ ಘಟಿಸಿರಲಿಲ್ಲ. ಆದರೆ ಮಣಿಲಾಲನಿಗೆ ಬಾಪೂ ಅವರ ಈ ಕರೆಯ ಹಿಂದಿದ್ದ ಕಾರಣ ತಿಳಿದಿತ್ತು. ಅವನು ಬೆವೆತ. ಅವನು ಭಯದಿಂದ ನಡುಗುತ್ತಾ ಬಹು ಕಷ್ಟದಿಂದ ಬಾಪೂ ಅವರ ಕೋಣೆಗೆ ಬಂದ. ಬಾಪೂ ನೆಲದ ಮೇಲೆ ಹಾಸಿದ್ದ ಚಾಪೆಯಲ್ಲಿ ಕೂತಿದ್ದರು, ಅವರ ಒಂದು ಭಾಗದಲ್ಲಿ ಲಲಿತಾ ಮತ್ತು ಚಂದಾ ಕೂತಿದ್ದರು. ಇಬ್ಬರ ದೃಷ್ಟಿ ನೆಲವನ್ನು ನೋಡುತ್ತಿದ್ದವು. ಅವರ ಬಾಗಿದ ತಲೆಗಳಲ್ಲಿ ಜೋತುಬಿದ್ದ ಅವರ ಕೇಶರಾಶಿಯ ಮೇಲೆ ಮಣಿಲಾಲನ ದೃಷ್ಟಿ ಬಿತ್ತು. ಮಣಿಲಾಲ ಬಹು ಕಷ್ಟದಿಂದ ಅಲ್ಲಿಂದ ಬೇರೆಡೆಗೆ ತನ್ನ ದೃಷ್ಟಿಯನ್ನು ಹೊರಳಿಸಿದ.

### ಹದಿನೆಂಟು

ಬಾಪೂ ಅವರು ಎರಡೂ ಕಾಲುಗಳನ್ನು ಮಡಿಚಿ, ಒಂದು ಉದ್ದ ದಿಂಬಿಗೊರಗಿ ಕೂತಿದ್ದರು. ಅವರ ದೃಷ್ಟಿ ಪದೇಪದೇ ಲಲಿತಾ, ಚಂದಾ ಮತ್ತು ಮಣಿಲಾಲನನ್ನೇ ಗಮನಿಸುತ್ತಿತ್ತು. ಅವರ ಮುಖದಲ್ಲಿ ಅಪಾರ ವ್ಯಥೆ ಹನಿಯುತ್ತಿತ್ತು. ತುಟಿಗಳು ಒಂದೇ ಸಮನೆ ಕಂಪಿಸುತ್ತಿದ್ದವು. ಕೋಣೆಯಲ್ಲಿ ಮೌನ ಕವಿದಿತ್ತು.

"ಮಣಿಲಾಲ..." ಕೆಲವು ಕ್ಷಣಗಳ ನಂತರ ಬಾಪೂ ಅವರ ತುಟಿಗಳು ಅಲುಗಿದವು. ಮಣಿಲಾಲ ಕಂಪಿಸಿದ.

"ಚಂದಾ ಇವತ್ತು ನನಗೇನು ಹೇಳಿದ್ದಾಳೆಯೋ, ಅದನ್ನು ನಿನ್ನ ಬಾಯಿಯಿಂದ ನಾನು ಕೇಳಲು ಬಯಸುತ್ತೇನೆ. ನಾನು ನನ್ನ ನಿಷ್ಠೆ ಮತ್ತು ವರ್ತನೆಯಲ್ಲಿ ಎಲ್ಲಿ ಅಪೂರ್ಣವಾಗಿದ್ದೇನೆ ಎಂದು ತಿಳಿಯುತ್ತಿಲ್ಲ. ನಾನಿದನ್ನೇ ತಿಳಿಯಲು ಬಯಸುತ್ತೇನೆ." ಬಾಪೂ ತುಂಬಾ ಕಷ್ಟದಿಂದ ಈ ಮಾತನ್ನು ಹೇಳಿದ್ದರು.

ಮಣಿಲಾಲ ಒಂದು ಶಬ್ದವನ್ನೂ ಹೇಳದಾದ.

'ಚಂದಾಳ ಹೇಳಿಕೆಯಲ್ಲಿ ಲಲಿತಾ ಸಹ ಧ್ವನಿಗೂಡಿಸಿದ್ದಾಳೆ. ಮಣಿ, ನನ್ನ ಯಾವ ಪಾಪದ ನೆರಳು ನಿನ್ನನ್ನು ಹಿಡಿದುಕೊಂಡಿದೆಯೋ...' ಬಾಪೂ ಅವರ ಗಂಟಲು ಒತ್ತಿ ಬಂತು. ಅವರಿಂದ ಆ ಕ್ಷಣ ಮುಂದಕ್ಕೆ ಮಾತನಾಡಲು ಸಾಧ್ಯವಾಗಲಿಲ್ಲ.

'ಬಾಪೂಜಿ...' ಮಣಿಲಾಲನಿಂದ ಬಾಪೂ ಅವರ ಈ ನೋವು ಮತ್ತು ದುಃಖವನ್ನು ನೋಡಲಾಗಲಿಲ್ಲ. ಅನಾಯಾಸವಾಗಿ ಉದ್ಭವಿಸಿದ ಕ್ಷಣಿಕ ಆಕರ್ಷಣೆಯ ಆ ಕ್ಷಣಗಳಲ್ಲಿ ತಾನೆಷ್ಟು ಭಯಾನಕ ಪಾಪಕಾರ್ಯವನ್ನೆಸಗಿದ್ದೇನೆ... ಅದರ ಭಯಾನಕ ಕುಟುಕು ಅವನ ರೋಮರೋಮವನ್ನು ಕುಟುಕಿತು, "ಚಂದಾ ಹೇಳುತ್ತಿರುವುದು ನಿಜ... ನಾನು ಪಾಪಕಾರ್ಯವನ್ನು ಮಾಡಿದ್ದೇನೆ...ನೀವು ಲಲಿತಾಳಿಗೆ ಶಿಕ್ಷೆಯನ್ನು ಕೊಡಬೇಡಿ... ಬಾಪೂಜಿ, ನೀವು ಇಬ್ಬರ ಶಿಕ್ಷೆಯನ್ನು ನನಗೇ ಕೊಡಿ." ಮಣಿಲಾಲ ರೋದಿಸಿದ.

'ಮಣಿಲಾಲ' ಬಾಪೂ ಅವರು ಮಣಿಲಾಲನ ಕೈಯನ್ನು ಹಿಡಿದು ಅವನನ್ನು ತಮ್ಮ ಬಳಿ ಕೂರಿಸಿಕೊಂಡರು, 'ಮಣಿ, ನೀನು ಪಾಪ ಕಾರ್ಯವನ್ನು ಮಾಡಿದ್ದೀಯ, ಇದರಲ್ಲಿ ನಿನ್ನ ದೋಷ ಮಾತ್ರವಿಲ್ಲ, ನನ್ನ ದೋಷವೂ ಇದೆ... ನಾನು ನಿನಗೆ ಯೋಗ್ಯ ಶಿಕ್ಷಣವನ್ನು ಕೊಡದಾದೆ, ಇದು ನನ್ನ ವಿಫಲತೆಯ ಪರಿಣಾಮವೇ ಆಗಿದೆ. ಶಿಕ್ಷೆಗೆ ನಾನೇ ಖುದ್ದು ಯೋಗ್ಯ.'

'ಬಾಪೂ...' ಚಂದಾ ಮೊದಲ ಬಾರಿಗೆ ಬಾಯಿಯನ್ನು ತೆರೆದಳು. ಅವಳ ಕಣ್ಣುಗಳು ತುಂಬಿ ಬಂದಿದ್ದವು, 'ಅಪರಾಧಿ ನಾನೇ...ಮಣಿಲಾಲನ ಈ ದೌರ್ಬಲ್ಯವನ್ನು ನನ್ನಲ್ಲೇ ಇಟ್ಟುಕೊಳ್ಳಲಾಗಲಿಲ್ಲ, ಹೀಗಾಗಿ ಈ ಮಾತನ್ನು ನಿಮಗೆ ಹೇಳಿದೆ...'

'ಮಗಳೇ, ನೀನು ಮಾಡಿದ್ದು ಸರಿಯೇ!' ಬಾಪೂ ಅವರು ಚಂದಾಳ ತಲೆಯನ್ನು ನೇವರಿಸಿದರು, 'ಪಾಪ ಮತ್ತು ರೋಗ ಹೆಚ್ಚುವುದಕ್ಕೂ ಮೊದಲೇ ಅವುಗಳನ್ನು ಹೊರಗೆ ಹಾಕಬೇಕು. ಈಗ ಪ್ರಶ್ನೆ ಏನೆಂದರೆ, ಮಣಿಲಾಲನಿಗೆ ಈ ಲಲಿತಾಳಲ್ಲಿ, ಪಾಪದ ಮಾರ್ಗದಲ್ಲಿ ಹೆಜ್ಜೆಯಿಡುವಂಥದ್ದು ಕಂಡಿದ್ದಾದರೂ ಏನು? ಅವನಿಗೆ ತನ್ನ ಪರಿವಾರದ ಕನ್ಯೆಯೊಬ್ಬಳು, ಸಹೋದರಿಯ ಬದಲಾಗಿ, ಪರಸ್ತ್ರೀಯಾಗಿ ಯಾಕೆ ಕಂಡಳು?'

ಮಣಿಲಾಲನ ಕಣ್ಣುಗಳೆದುರು ಆಶ್ರಮದ ಮರಗಳ ಸಾಲಿನ ನಡುವೆ ಹರಿಯುವ ನೀರಿನ ಸಮೀಪದಲ್ಲಿ, ನೆನೆದ ದೇಹದಲ್ಲಿ ನಿಂತ ಲಲಿತಾಳ ನೀಳ ಮತ್ತು ಸುಂದರ ಕೇಶಗಳು ಮೂಡಿದವು. ಆ ಮೋಹಕ ಕೇಶರಾಶಿಯೇ ಅವನ ಅಸ್ತಿತ್ವವನ್ನು ಅಲುಗಾಡಿಸಿತ್ತು. ಆ ಕೇಶರಾಶಿಯಿಂದಾಗಿಯೇ ಇಂದು ಅವನು ಚಂದಾಳನ್ನು, ಲಲಿತಾ ಎಂದು ತಿಳಿಯುವ...

'ಹೇಳು ಮಣಿಲಾಲ...' ಬಾಪೂ ಅವರ ಕೋರಿಕೆಯಲ್ಲಿ ವೇದನೆಯಿತ್ತು, 'ಈ ಕನ್ಯೆಯರ ಯಾವ ರೂಪ ನಿನ್ನನ್ನು ಪಾಪದ ಕೂಪಕ್ಕೆ ತಳ್ಳಿತು...? ಸತ್ಯದ ಸ್ವೀಕಾರ ನಿನ್ನನ್ನು ಪ್ರಾಯಶ್ಚಿತ್ತದ